ಶ್ರೀ ಹೆಚ್.ಶಿವಪ್ಪ:- ಮಾನ್ಯ ಅಧ್ಯಕ್ಷರೇ, ಈ ಯೋಜನೆಗೆ ಮೂಲತಃ ಕಾರಣರಾದ ಸನ್ಮಾನ್ಯ ನಿಜಲಿಂಗಪ್ಪನವರ ಹೆಸರನ್ನು ಇದಕ್ಕೆ ಇಡಲಿಕ್ಕೆ ಸರ್ಕಾರ ಏನಾದರೂ ತೀರ್ಮಾನ ಮಾಡಿದೆಯೇ?

ಶ್ರೀ ಕೆ.ಎನ್.ನಾಗೇಗೌಡ:- ಮಾನ್ಯ ಅಧ್ಯಕ್ಷರೇ, ಆ ಯೋಜನೆ ಮಾಡುವುದಕ್ಕೇ ಅವರು ಅನುಮಾನ ಪಡುತ್ತಿದ್ದಾರೆ. ಎಲ್ಲಿದೆ ನೀರು ಹೇಳಿ ಅಂತ ಹೇಳುತ್ತಾರೆ? ಎಲ್ಲಿ ಎಸ್ಟಿಮೇಟ್ ಇದೆ ಅಂತ ಹೇಳುತ್ತಾರೆ? ಯೋಜನೆಗೆ ಮಾನ್ಯ ನಿಜಲಿಂಗಪ್ಪನವರು ಹೆಸರು ಇಡುತ್ತೀರಾ? ಎಂದು ಕೇಳುತ್ತಿದ್ದಾರೆ. ಈ ಯೋಜನೆಗೆ ಮಾನ್ಯ ನಿಜಲಿಂಗಪ್ಪನವರ ಹೆಸರನ್ನು ಇಡಲೇಬೇಕೆಂಬುದು ನಮ್ಮ ಆಸೆ. ನಾವು ಆ ಹೆಸರು ಇಡುತ್ತೇವೆ. Kindly cooperate with us.

ಅಧ್ಯಕ್ಷರು:- ಅರ್ಧ ಗಂಟೆ ಕಾಲಾವಧಿಯಡಿಯಲ್ಲಿ ಇದನ್ನು ಚರ್ಚೆಗೆ ತೆಗೆದುಕೊಳ್ಳೋಣ. ಯೋಜನೆಗೆ ಯಾರ ಹೆಸರನ್ನಾದರೂ ಇಟ್ಟುಕೊಳ್ಳಲಿ. ಇನ್ನಾವುದಾದರೂ ಒಂದು ಯೋಜನೆಗೆ ಮಾನ್ಯ ಸದಸ್ಯರ ಹೆಸರನ್ನೂ ಇಟ್ಟುಬಿಡಿ. ಇಲ್ಲಿಗೆ ಪ್ರಶ್ನೋತ್ತರ ಮುಗಿಯಿತು.

2 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಬಾಯಿ ಮಾತಿನ ಮಾತಿನ ಮೂಲಕ ನೀಡಲಾದ ಉತ್ತರಗಳು.

ಶ್ರೀ ಜಿ.ಬಸವಣ್ಣೆಪ್ಪ (ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರು):- ಮಾನ್ಯ ಅಧ್ಯಕ್ಷರೇ, ದಿನಾಂಕ 23ನೇ ಜುಲೈ 1996 13ನೇ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ 86 ಪ್ರಶ್ನೆಗಳ ಪೈಕಿ 70 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ವಿಷಯ:- ರಾಜ್ಯದಲ್ಲಿರುವ ವಿದ್ಯುತ್ ಉತ್ಪಾದನಾ ಕೇಂದ್ರಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 153 (963)

ಶ್ರೀ ಯು.ಬಿ.ಬಣಕಾರ್ (ಹಿರೇಕೋರ್):- ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ವಿದ್ಯುತ್ ಉತ್ಪಾದನಾ ಕೇಂದ್ರಗಳು ಎಷ್ಟು? ಅವು ಯಾವುವು?

ಆ) 1993-94ನೇ ಸಾಲಿನಿಂದ ಪ್ರತಿ ವರ್ಷ ಅವುಗಳು ಉತ್ಪಾದನಾ ಸಾಮರ್ಥ್ಯದ ಗುರಿ ಎಷ್ಟು ಹಾಗೂ ಉತ್ಪಾದನೆ ಆದ ವಿದ್ಯುತ್ ಪ್ರಮಾಣ ಎಷ್ಟು?

ಶ್ರೀ ಶರಣ ಬಸಪ್ಪ ದಾರ್‌ಸನಪುರ್ (ಇಂಧನ ರಾಜ್ಯ ಸಚಿವರು):-

ಅ) ರಾಜ್ಯದಲ್ಲಿ ವಿದ್ಯುತ್ ನಿಗಮ ಹಾಗೂ ವಿದ್ಯುತ್ ಮಂಡಳಿಯ ವಿದ್ಯುದಾಗಾರಗಳು ಸೇರಿ ಒಟ್ಟಾರೆ 22 ವಿದ್ಯುತ್ ಉತ್ಪಾದನಾ ಕೇಂದ್ರಗಳಿವೆ. ಅವು ಯಾವುವೆಂದರೆ :